**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ10042/2021.**

ಪಿಡಬ್ಲೂ–7

ಸಿಡಬ್ಲೂ–8

ಸಾಕ್ಷಿ ಹೆಸರು – ಮಹೇಶ ಗೌಡ

ತಂದೆ ಹೆಸರು – ಶಿವಾನಂದಪ್ಪಗೌಡ

ವಯಸ್ಸು – 47 ವರ್ಷ

ಉದ್ಯೋಗ – ವ್ಯವಸಾಯ

ವಾಸಃ – ಕಚವಿ ಗ್ರಾಮ, ಸೊರಬ ತಾಲ್ಲೂಕು.

**ಪ್ರಮಾಣ ವಚನ ಭೋದಿಸಿದ ದಿನಾಂಕಃ 10–10–2024**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನನಗೆ ಪ್ರಾ ಸಾ –1 , ಪ್ರಾ ಸಾ –2, ಚಾಸಾ13 ರವರು ಗೊತ್ತು. ಪ್ರಾ ಸಾ 4 ರಿಂದ ಪ್ರಾ ಸಾ6 , ಚಾಸಾ9 ರಿಂದ ಚಾಸಾ–12 ರವರ ಪರಿಚಯ ಇದೆ. ಆರೋಪಿ ನಮ್ಮ ಊರಿನವನಾಗಿದ್ದು ನನಗೆ ಆರೋಪಿಯ ಪರಿಚಯ ಇದೆ. ಪ್ರಾ ಸಾ –2 ಮತ್ತು ಆರೋಪಿಗೂ ಜೋಳ ಹಾಕಿದ ವಿಚಾರದಲ್ಲಿ ತಕರಾರು ಇತ್ತು.

ದಿನಾಂಕಃ 18–05–2020 ರಂದು ಬೆಳಿಗ್ಗೆ 11 ಗಂಟೆಗೆ ನಾನು ಮತ್ತು ಪ್ರಾ ಸಾ – 6 ರವರು ನಮ್ಮ ಜಮೀನಿನಲ್ಲಿ ಜೋಳ ಮುರಿಯುತ್ತಿದ್ದು ಸದರಿ ಜೋಳವನ್ನು ಟ್ರಾಕ್ಟರ್ ನಲ್ಲಿ ಹೇರಿಕೊಂಡು ಹೋಗುತ್ತಿದ್ದೆವು. ಆ ಸಮಯದಲ್ಲಿ ಆರೋಪಿಯು ಪ್ರಾ ಸಾ –2 ರವರಿಗೆ ದೊಣ್ಣೆಯಿಂದ ತಲೆಯ ಮೇಲೆ ಹೊಡೆದಿರುತ್ತಾನೆ. ಪ್ರಾಸಾ –2 ರವರು ಸದರಿ

ಟ್ರಾಕ್ಟರ್ ನ್ನು ಓಡಿಸುತ್ತಿದ್ದರು. ಪ್ರಾ ಸಾ –2 ರವರ ಸರ್ವೆ ನಂಬರ್ 6 ಆಗಿತ್ತು. ಪ್ರಾ ಸಾ –2 ರವರು ಟ್ರಾಕ್ಟರ್ ನಲ್ಲಿ ಜೋಳವನ್ನು ತುಂಬಿಕೊಂಡು ಆರೋಪಿಯ ಜಮೀನಿನ ಮೂಲಕ ಹೋಗುತ್ತಿದ್ದರು. ಆಗ ಆರೋಪಿಯು ಪ್ರಾ ಸಾ – 2 ರವರ ಟ್ರಾಕ್ಟರ್ ನ್ನು ಸ.ನಂ. 6 ರಲ್ಲಿ ಅಡ್ಡಗಟ್ಟಿ ನಮ್ಮ ಗದ್ದೆಯಲ್ಲಿ ಯಾಕೆ ಟ್ರಾಕ್ಟರ್ ನ್ನು ಓಡಿಸುತ್ತಿದ್ದೀಯಾ ಎಂದು ಲಫಂಗ ಎಂದು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದ ನಾನು ದೂರ ಇದ್ದದ್ದರಿಂದ ಏನು ಕೆಟ್ಟ ಶಬ್ದಗಳಿಂದ ಬೈಯ್ಯುತ್ತಿದ್ದ ಎಂದು ಗೊತ್ತಾಗಲಿಲ್ಲ.ನಂತರ ಆರೋಪಿಯು ದೊಣ್ಣೆಯಿಂದ ಪ್ರಾ ಸಾ –2 ರವರ ತಲೆಗೆ ಹೊಡೆದಿರುತ್ತಾನೆ. ಆ ಸಮಯದಲ್ಲಿ ನಾನು ದೂರದಲ್ಲಿ ಇದ್ದ ಕಾರಣ ಆರೋಪಿಯು ಏನು ಹೇಳಿ ಹೊಡೆದನು ಎಂದು ನನಗೆ ಕೇಳಿಸಿಲ್ಲ . ಪ್ರಾ ಸಾ –2 ರವರಿಗೆ ಯಾವುದೇ ರಕ್ತ ಬಂದಿಲ್ಲ ಆದರೆ ಬಾವು ಬಂದಿರುತ್ತದೆ, ಪ್ರಾ ಸಾ–2 ರವರ ಪ್ರಜ್ಞೆ ತಪ್ಪಿತ್ತು.

ಟ್ರಾಕ್ಟರ್ ನಲ್ಲಿ ಪ್ರಾ ಸಾ –1 , ಪ್ರಾ ಸಾ –2 , ಪ್ರಾ ಸಾ –4, ಚಾಸಾ–13 ರವರು ಇದ್ದರು. ಆರೋಪಿಯು ಪ್ರಾ ಸಾ –2 ರವರಿಗೆ ಹೊಡೆದ ನಂತರ ಟ್ರಾಕ್ಟರ್ ನಲ್ಲಿ ಇದ್ದವರು ಟ್ರಾಕ್ಟರ್ ನಿಂದ ಇಳಿದ ತಕ್ಷಣ ಆರೋಪಿಯು ದೊಣ್ಣೆಯನ್ನು ಬಿಸಾಡಿ ಓಡಿ ಹೋಗಿರುತ್ತಾನೆ. ನಂತರ ಪ್ರಾ ಸಾ –2 ರವರನ್ನು ಅವರ ಓಮಿನಿಯಲ್ಲಿ ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ.

ಆರೋಪಿಯು ಪ್ರಾ ಸಾ –2 ರವರಿಗೆ ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದೊಣ್ಣೆಯನ್ನು ನೋಡಿ ಗುರುತಿಸಿದು ಅದನ್ನು ಈಗಾಗಲೇ ಮು ಮಾ –1 ಎಂದು ಗುರುತಿಸಲಾಗಿದೆ. ಆರೋಪಿ ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಆರೋಪಿಯು ಪ್ರಾ ಸಾ –2 ರವರಿಗೆ ಸೂಳೆ ಮಕ್ಕಳಾ, ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ನಾನು ದೂರ ಇದ್ದ ಕಾರಣ ಕೇಳಿಸಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಪ್ರಾ ಸಾ –2 ರವರಿಗೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಸಾಯಿಸುತ್ತೇನೆ ಎಂದು ಹೇಳುತ್ತಾ ಮು ಮಾ –1 ರಿಂದ ಹೊಡೆದಿರುತ್ತಾನೆ ಎಂದರೆ ಇರಬಹುದು. ಪೋಲೀಸರ ಮುಂದೆ ನಾನು ಕೊಟ್ಟಂತಹ ಹೇಳಿಕೆಯಲ್ಲಿ ಈ ವಿಷಯವನ್ನು ಹೇಳಿರುತ್ತೇನೆ ಎಂದರೆ ಹೌದು.

**<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>**

ನನ್ನ ಜಮೀನಿನ ಸರ್ವೆ ನಂಬರ್ 5. ನನ್ನ ಜಮೀನಿಗೂ ಪ್ರಾಸಾ –1 ರವರ ಜಮೀನು 70–80 ಮೀಟರ್ ದೂರ ಇರುತ್ತದೆ. ನನ್ನ ಜಮೀನಿನಲ್ಲಿ ನಾನು ಮತ್ತು ನನ್ನ ಜಮೀನಿನಲ್ಲಿ ಕೆಲಸ ಮಾಡುವ ಆಳುಗಳು ಇದ್ದೆವು. ಮೆಕ್ಕೆ ಜೋಳದ ಗಿಡ ಎತ್ತರ ಇರುತ್ತವೆ ಎಂದರೆ ಹೌದು. ಮೆಕ್ಕೆ ಜೋಳದ ತೋಟದಲ್ಲಿ ಬೆಳೆದ ಜೋಳದ ಗಿಡಗಳು ಇದ್ದ ಕಾರಣ ನಿಂತರೆ ಕಾಣುವುದಿಲ್ಲ ಎಂದರೆ ಹೌದು. ಮೆಕ್ಕೆ ಜೋಳದ ಕುಂಡಿಗೆಯನ್ನು ಮುರಿದು ಒಂದು ಕಡೆ ಹಾಕುತ್ತಿದ್ದೆವು ಎಂದರೆ ಹೌದು.

ಗಲಾಟೆ ಸಮಯದಲ್ಲಿ ಪ್ರಾ ಸಾ –1 ರವರು ನನ್ನನ್ನು ಕರೆದಿರುವುದಿಲ್ಲ. ನನಗೆ ಗಲಾಟೆ ಕೇಳಿಸಿದ 2 ನಿಮಿಷದಲ್ಲಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ನಮ್ಮ ಟ್ರಾಕ್ಟರ್ ನಲ್ಲಿ ಜೋಳ ತುಂಬುತ್ತಿದ್ದರಿಂದ ಪ್ರಾ ಸಾ –2 ರವರ ಟ್ರಾಕ್ಟರ್ ನಲ್ಲಿ ಯಾರು ಯಾರೂ

ಎಲ್ಲೆಲ್ಲಿ ಕೂತಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಪ್ರಾ ಸಾ –2 ರವರು ಟ್ರಾಕ್ಟರ್ ಚಾಲನೆ ಮಾಡುತ್ತಿದ್ದರು. ಆರೋಪಿಯು ಪ್ರಾ ಸಾ –2 ರವರಿಗೆ ಹೊಡೆಯುವ ಪೂರ್ವದಲ್ಲಿ ನಾನುಸ ್ಥಳದಲ್ಲಿ ಇರಲಿಲ್ಲ. ನಾನು ಹೋಗುವಷ್ಟರಲ್ಲಿ ಸ್ಥಳದಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ ಪ್ರಾ ಸಾ –1 ರವರು ಗಲಾಟೆ ಬಗ್ಗೆ ಹೇಳಿದ್ದರಿಂದ ಗೊತ್ತಾಯಿತು ಎಂದರೆ ನಾನು ದೂರದಿಂದ ಆರೋಪಿಯು ಪ್ರಾ ಸಾ 2 ರವರಿಗೆ ಹೊಡೆಯುವುದನ್ನು ನಾನು ನೋಡಿರುತ್ತೇನೆ. ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಆರೋಪಿಯು ಪ್ರಾ ಸಾ –2 ರವರಿಗೆ ಹೊಡೆಯಲು ಬಂದಾಗ ಪ್ರಾ ಸಾ –2 ರವರು ಟ್ರಾಕ್ಟರ್ ನಲ್ಲಿ ಡ್ರೈವಿಂಗ್ ಮಾಡಿಕೊಂಡು ಹೋಗುತ್ತಿದ್ದ. ಟ್ರಾಕ್ಟರ್ ಡ್ರೈವರ್ ಸೀಟ್ ನ ಅಕ್ಕಪಕ್ಕದಲ್ಲಿ 2–2 ಸೀಟುಗಳು ಇದ್ದು ಸದರಿ ಸೀಟುಗಳಲ್ಲಿ ಯಾರು ಯಾರು ಕೂತಿದ್ದರು ಎಂದು ನನಗೆ ಗೊತ್ತಿಲ್ಲ.

ಆ ಸೀಟುಗಳಲ್ಲಿ ಕೂತದಂತಹ ವ್ಯಕ್ತಿಗಳು ಗಲಾಟೆ ಆಗುವಾಗ ಗಲಾಟೆಯನ್ನು ಬಿಡಿಸಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಟ್ರಾಕ್ಟರ್ ನ ಡ್ರೈವರ್ ಸೀಟ್ ನೆಲದಿಂದ 5 ಅಡಿ ಎತ್ತರದಲ್ಲಿ ಇರುತತದೆ ಎಂದರೆ ಹೌದು. ಸದರಿ ಸೀಟಿ ನ ಡ್ರೈವರ್ ಮೇಲೆ ಕೂತರೆ 3 ಅಡಿ ಎತ್ತರ ಕಾಣುತ್ತಾರೆ ಎಂದರೆ ಹೌದು. ಆರೋಪಿಯು ದೊಣ್ಣೆಯಿಂದ ಪ್ರಾ ಸಾ –2 ರವರಿಗೆ ಹೊಡೆಯಬೇಕಾದರೆ ಟ್ರಾಕ್ಟರ್ ಡ್ರೈವರ್ ಸೀಟ್ ಪಕ್ಕ ಕೂತ ವ್ಯಕ್ತಿಗಳನ್ನು ದಾಟಿ ಹೋಗಬೇಕು ಎಂದರೆ ಹೌದು. ಆರೋಪಿಯು ಕೋಲನ್ನು ಬೀಸುವ ಸಮಯದಲ್ಲಿ ಕೂತಂತಹ ವ್ಯಕ್ತಿಗಳಿಗೆ ದೊಣ್ಣೆಯನ್ನು ಹಿಡಿದುಕೊಳ್ಳುವ ಅವಕಾಶ ಇತ್ತು ಎಂದರೆ ಹೌದು.

ಮು ಮಾ –1 ರಂತಹ ದೊಣ್ಣೆ ಯನ್ನು ಯಾವ ಉದ್ದೇಶಕ್ಕೆ ಉಪಯೋಗಿಸುತ್ತಾರೋ ಗೊತ್ತಿಲ್ಲ . ಮು ಮಾ –1 ರಂತಹ ದೊಣ್ಣೆಯನ್ನು ಟ್ರಾಕ್ಟರ್ ಗೆ ಜೋಳ ತುಂಬಿಸುವಾಗ ಸೈಡುಗಳಲ್ಲಿ ನಿಲ್ಲಿಸಿ ಉಪಯೋಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಟ್ರಾಕ್ಟರ್ ಗೆ ಜೋಳ ತುಂಬಿಸುವಾಗ ಸಪೋರ್ಟ್ ಆಗಿ ಮು ಮಾ 1 ರಂತಹ ದೊಣ್ಣೆಗಳನ್ನು ಹಾಕುತ್ತೇವೆ ಎಂದರೆ ಹೌದು. ಮು ಮಾ –1 ದೊಣ್ಣೆ ಟ್ರಾಕ್ಟರ್ ನಲ್ಲಿ ಇತ್ತೋ ಇಲ್ಲವೋ ನಾನು ನೋಡಿಲ್ಲ. ಮು ಮಾ –1 ಕ್ಕೆ ನಾನು ವಿಶೇಷವಾದ ಗುರುತು ಇಟ್ಟುಕೊಂಡಿಲ್ಲ ಅದರ ಬಗ್ಗೆ ನನಗೆ ಗೊತ್ತಿಲ್ಲ. ಮು ಮಾ –1 ಆರೋಪಿಯ ಗದ್ದೆಯಲ್ಲಿ ಇತ್ತು ಅದು ಹೇಗೆ ಬಂದು ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ಫ್ರಾ ಸಾ –1 ರವರು ಚೆನ್ನಾಗಿದ್ದೇವೆ ಎಂದರೆ ಹೌದು. ನಾನು ಫ್ರಾ ಸಾ –1 ರವರ ಜೊತೆ ಚೆನಾನಗಿರುವುದರಿಂದ ಫ್ರಾ ಸಾ 1 ಮತ್ತು ಫ್ರಾ ಸಾ 2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳಕ್ಕೆ ನಾನು ಮತ್ತು ಫ್ರಾ ಸಾ –6 ಜಯಶೀಲಗೌಡ ರವರು ಹೋಗಿರುತ್ತೇವೆ.

ಗಲಾಟೆಯಾದ ಹಿಂದಿನ ದಿನ ಮಳೆ ಬಂದಿತ್ತು ಎಂದರೆ ಹೌದು. ಮಳೆ ಬಂದಾಗ ಟ್ರಾಕ್ಟರ್ ಗೆ ಜೋಳ ತುಂಬಿಸಿದಾಗ ಜೋಳದ ಹೊಲದಲ್ಲಿ ಡ್ರೈವ್ ಮಾಡುವಾಗ ಆ ಕಡೆ ಈ ಕಡೆ ಟ್ರಾಕ್ಟರ್ ವಾಲಾಡುತ್ತದೆ ಎಂದರೆ ಹೌದು. ಮಳೆ ಬಿದ್ದಾಗ ಕೆಲವು ಸಲ ಟ್ರಾಕ್ಟರ್ ಮಗುಚಿ ಬೀಳುವ ಸಾಧ್ಯತೆ ಇದೆ ಎಂದರೆ ಹೌದು. ಆ ರೀತಿ ಸಿಕ್ಕಿ ಹಾಕಿಕೊಂಡಾಗ ಜೋರಾಗಿ ಪ್ರೆಶರ್ ಕೊಟ್ಟಾಗ ಟ್ರಾಕ್ಟರ್ ಮುಂಭಾಗದ ಚಕ್ರ ಮೇಲೆ ಏಳುತ್ತದೆ ಎಂದರೆ ಹೌದು. ಈ ರೀತಿ ಟ್ರಾಕ್ಟರ್ ಮೇಲೆ ಎದ್ದಾಗ ಚಾಲಕನ ಸೀಟಿನಲ್ಲಿ ಕೂತವರಿಗೆ ಹೊಡೆತ ಬೀಳುತ್ತದೆ ಎಂದರೆ ಹೌದು. ಈ ರೀತಿ ಚಕ್ರ ಎದ್ದು ಹಿಂದೆ ತಿರುಗಿ ಫ್ರಾ ಸಾ –2 ರವರ ಮೇಲೆ ಬಿದ್ದ ಕಾರಣ ಫ್ರಾ ಸಾ –2 ರವರಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ಜಮೀನಿನಲ್ಲಿ ಕಳೆ ಔಷಧಿ ಹೊಡೆದಿದ್ದಾನೆ ಎಂದುನನಗೆ ಮತ್ತು ಆರೋಪಿಗೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಈ ಬಗ್ಗೆ ದೂರು ನೀಡಿರುತ್ತೇನೆ ಎಂದರೆ ಹೌದು. ಈ ವಿಚಾರವಾಗಿ ಆನವಟ್ಟಿ ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಹೌದು. ಸದರಿ ದೂರನ್ನು ಆರೋಪಿಯ ಹೆಂಡತಿ ಮತ್ತು ಅವರ ಮಾವ ಕೊಟ್ಟಿದ್ದಾರೆ ಎಂದರೆ ಹೌದು. ಆ ವಿಷಯವಾಗಿ ಪ್ರಾಸಾ1 ರವರ ಮಾತು ಕೇಳಿ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದಂತೆ ಯಾವುದೇ ಗಲಾಟೆ ನಡೆಯಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನೆ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ ಪ್ರಾ ಸಾ –1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆಯಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).